<u>ಸಾಕ್ಷಿಯನ್ನು ದಿಃ 22-01-2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು 4 ಹಾಗೂ 5 ನೇ ಪ್ರತಿವಾದಿಗಳ ಪರ ಶ್ರೀ ಬಿ ಎನ್ ಟಿ ವಕೀಲರಿಂದಃ</u>**

ಕೊರಮಪ್ಪ ಎಷ್ಟು ಗಂಟೆಗೆ ಮೃತ್ಯು ಪತ್ರ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಮೃತ್ಯು ಪತ್ರವನ್ನು ಮದ್ಯಾಹ್ನ ಬರೆದಿದ್ದಾರೆ ನಾನು ಎರದಕಟ್ಟೆ ಗ್ರಾಮದ ವಾಸಿ. ನಾನು ಎರದಕಟ್ಟೆಯಿಂದ ಶಿರಾಗೆ ಬೆಳಿಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಹೋಗಿದ್ದೆ. ಆ ದಿನ ಎರದಕಟ್ಟೆಯಿಂದ ನಾನು , ಮುದ್ದಣ್ಣರ ಈರಣ್ಣ , ಕೊರಮಜ್ಜ, ಕರಿಯಜ್ಜಿ ಶಿರಾಕ್ಕೆ ಹೋಗಿದ್ದೆವು. ಆ ದಿನ ಎರದಕಟ್ಟೆಯಿಂದ ಬೆಳಿಗ್ಗೆ ತಿಂಡಿ ತಿಂದು ನಾವು ಹೊರಟ್ಟಿದ್ದೆವು. ನಾನು ಹೇಳಿದ ಮೃತ್ಯು ಪತ್ರಕ್ಕೆ ಈರಣ್ಣ ಸಹಿ ಮಾಡಿದ್ದಾನೆ. ಈರಣ್ಣ ಎಷ್ಟು ವಿದ್ಯಾಭ್ಯಾಸ ಮಾಡಿದ್ದಾನೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆತ ಓದಿಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ಮುದ್ದಣ್ಣರ ಈರಣ್ಣ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ. ಆತನ ಹೆಬ್ಬೆಟ್ಟಿನ ಗುರುತನ್ನು ನಾನೇ ಗುರುತಿಸಿದ್ದೇನೆ.

ಕೊರಮಪ್ಪನ ಹೆಬ್ಬೆಟ್ಟಿನ ಗುರುತನ್ನು ಯಾರು ಗುರುತಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನೇ ಗುರುತಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಮೃತ್ಯು ಪತ್ರವನ್ನು ಬಿ ವಿ ಜಯಚಂದ್ರ ಎನ್ನುವವರು ಬರೆದಿದ್ದಾರೆ. ಮೃತ್ಯು ಪತ್ರ ಮಾಡಿದ್ದಾರೆ ಎಂದು ಹೇಳುವ ಪೂರ್ವದಲ್ಲಿ ನಾನು ಬಿ ವಿ ಜಯಚಂದ್ರನನ್ನು ನೋಡಿಲ್ಲ. ಆ ಮೃತ್ಯು ಪತ್ರವನ್ನು ಬರೆದಿದ್ದಾರೆ ಎಂದು ಹೇಳುವ ಸಮಯದಲ್ಲಿ ಸದರಿ ಬಿ ವಿ ಜಯಚಂದ್ರನಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಶರಾಕ್ಕೆ ಹೋಗುವಾಗ ನಮ್ಮ ಜೊತೆ ಚುನಾವಣಾ ಗುರುತಿನಚೀಟಿ, ಮತ್ತಿತರ ಗುರುತಿನ ಚೀಟಿಯನ್ನು ತೆಗೆದುಕೊಂಡು ಹೋಗಿಲ್ಲ.

ಆ ದಿನ ನಾವು ಯರದಕಟ್ಟೆಯಿಂದ ಹೋಗುವಾಗಲೇ ಕೊರಮಪ್ಪ ಬರೆದ ಪತ್ರವನ್ನು ತಮ್ಮ

ಜೊತೆ ತಂದಿದ್ದರು. ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿದೆ ಯಾವ ಯಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೃತ್ಯು ಪತ್ರ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸರ್ವೆ ನಂ.11/1 ರಲ್ಲಿರುವ 8 ಎಕರೆ 9 ಗುಂಟೆಗೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ.

ಸರ್ವೆ ನಂ.11/1 ರ ಸ್ವತ್ತಿಗೆ ಯಾವ ಚೆಕ್ಕುಬಂದಿಯನ್ನು ಮೃತ್ಯು ಪತ್ರದಲ್ಲಿ ನಮೂದಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಮೃತ್ಯು ಪತ್ರವನ್ನು ಬರೆಸಲು ಕೊರಮಪ್ಪ ಜಯಚಂದ್ರರವರಿಗೆ ಯಾವ ಯಾವ ದಾಖಲೆಗಳನ್ನು ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನಗೆ ನೆನಪಿರುವಂತೆ ಪಹಣಿ ಪತ್ರಿಕೆಯನ್ನು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಮೃತ್ಯು ಪತ್ರ ಮಾಡುವಾಗ ಕರಿಯಮ್ಮ ಇದ್ದರು ಎಂದು ನೀವು ಹೇಳಿದ್ದು ಮೃತ್ಯು ಪತ್ರಕ್ಕೆ ಅವರ ಸಹಿಯನ್ನು ಏಕೆ ಪಡೆದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಕೆಗೆ ಸಹಿ ಮಾಡಲು ಕೊರಮಪ್ಪ ಹೇಳಿದ್ದರು, ಆದರೆ ಇಬ್ಬರೇ ಸಾಕು ಎಂದು ಜಯಚಂದ್ರ ಹೇಳಿದ್ದರು ಎಂದು ಉತ್ತರಿಸುೀತ್ತಾರೆ.

ಆ ದಿನ ಮೃತ್ಯು ಪತ್ರ ಬರೆಯುವಾಗ ಪಲ್ಲಕಪ್ಪ ಬಂದಿರಲಿಲ್ಲ ಆತ ತುಮಕೂರಿನಲ್ಲಿ ಓದುತ್ತಿದ್ದ. ಆಗ ಕೊರಮಪ್ಪನ ಅಣ್ಣ ಈರಜ್ಜ ಬಂದಿರಲಿಲ್ಲ. ಸಾಕ್ಷಿ ಮುಂದುವರೆದು ಈರಜ್ಜ ಸತ್ತುಹೋಗಿದ್ದ ಎಂದು ಉತ್ತರಿಸುತ್ತಾರೆ. ನಾನು, ಪಲ್ಲಕಪ್ಪ ಒಂದೇ ಕುಟುಂಬದವರು ಎಂದರೆ ಸರಿ. ಸರ್ವೆ ನಂ.11/1 ರ ಸ್ವತ್ತು ಈಗ ಯಾರ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. 1993-94 ರಿಂದ ಈವರೆಗೆ ಸರ್ವೆ ನಂ.11/1 ರ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಮೃತ್ಯು ಬರೆದಿದ್ದಾರೆ ಎಂದು ಹೇಳುವ ಬಿ ವಿ ಚಯಚಂದ್ರ ಈಗ ಬದುಕಿಲ್ಲ.

ಬಿ ವಿ ಜಯಚಂದ್ರ ಬರೆದ ಬೇರೆ ಪತ್ರಗಳನ್ನು ನಾನು ನೋಡಿಲ್ಲ ಬಿ ವಿ ಜಯಚಂದ್ರರವರ ಸಹಿಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಶಿರಾ ಪಟ್ಟಣದಲ್ಲಿ ಬಿ ವಿ ಜಯಚಂದ್ರ ಎನ್ನುವ ಹೆಸರಿನ ಪತ್ರ ಬರಹಗಾರರು ಯಾರೂ ಇಲ್ಲ ಎಂದರೆ ಸರಿಯಲ್ಲ ಸದರಿ ಜಯಚಂದ್ರ ಮೃತ ಪಟ್ಟು ಎಷ್ಟು ವರ್ಷಗಳಾಗಿವೆ ಎನ್ನುವುದು ನನಗೆ ಗೊತ್ತಿಲ್ಲ. ದಿಂಡಾವರದ ಜಮೀನಿನ ಪತ್ರವನ್ನು ಯಾರು ಬರೆದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಮದ್ದಣ್ಣರ ಈರಣ್ಣ ಹೆಬ್ಬೆಟ್ಟಿನ ಗುರುತು ಹಾಕಿರುವ ಬೇರೆ ಪತ್ರಗಳನ್ನು ನಾನು ನೋಡಿಲ್ಲ . ಮುದ್ದಣ್ಣರ ಈರಣ್ಣ ಮೃತಪಟ್ಟು ಸುಮಾರು 10 ವರ್ಷಗಳು ಕಳೆದಿವೆ.

ಮುದ್ದಣ್ಣರ ಈರಣ್ಣರ ಮಕ್ಕಳು ಮೊಮ್ಮಕ್ಕಳು ಯಾರೂ ಇಲ್ಲ. ನಿಪಿ-2 ರ ಮರಣ ಶಾಸನದಲ್ಲಿ ಏನು ಬರೆದಿದೆ ಎನ್ನುವುದು ಸಂಪೂರ್ಣವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕರಡು ಮರಣ ಶಾಸನವನ್ನು ಜಯಚಂದ್ರ ಬೇರೆ ಹಾಳೆಯಲ್ಲಿ ಬರೆದುಕೊಂಡಿದ್ದರು. ಆ ಹಾಳೆಯನ್ನು ಚಯಚಂದ್ರ ಅಲ್ಲಿಯೇ ಬಿಟ್ಟರು. ಆ ದಿನ ಬಿಳಿ ಹಾಳೆಯಲ್ಲಿ ಬರೆದಿದ್ದನ್ನು ಓದಿ ಹೇಳಿ ನಂತರ ಸ್ಟಾಂಪ್ ಪೇಪರ್ ನಲ್ಲಿ ಬರೆದಿದ್ದಾರೆ. ಸ್ಟಾಂಪ್ ಪೇಪರ್ ನಲ್ಲಿ ಬರೆದಿದ್ದನ್ನು ಮತ್ತೆ ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು, ಪಲ್ಲಕಪ್ಪ ಸೇರಿ ನಿಪಿ-2 ರ ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಕೊರಮಪ್ಪ ತನ್ನ ಜೀವಿತಾವಧಿಯಲ್ಲಿ ಸರ್ವೆ ನಂ.11/1 ರ ಸ್ವತ್ತಿನ ಬಗ್ಗೆ ಮೃತ್ಯು ಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.11/1 ನ್ನು ಈಗ ಪಲ್ಲಕಪ್ಪ ಅನುಭವಿಸುತ್ತಿದ್ದಾನೆ. ಸುಮಾರು 40-50 ವರ್ಷಗಳಿಂದ ಪಲ್ಲಕಪ್ಪ ಆ ಸ್ವತ್ತನ್ನು ಅನುಭವಿಸುತ್ತಿದ್ದಾನೆ. ಕೊರಮಪ್ಪನ ಹೆಂಡತಿ ಕರಿಯಮ್ಮಳ ಜೀವಿತಾವಾಧಿಯಲ್ಲಿ ಸರ್ವೆ ನಂ.11/1 ರ ಸ್ವತ್ತನ್ನು ಯಾರು

ಅನುಭವಿಸುತ್ತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಲ್ಲಕಪ್ಪನೇ ಅನುಭವಿಸುತ್ತಿದ್ದ ಎಂದು ಉತ್ತರಿಸುತ್ತಾರೆ. ಕೊರಮಪ್ಪನ ನಿಧನಾ ನಂತರ ಆತನ ಹೆಂಡತಿ ಕರಿಯಮ್ಮ ಸರ್ವೆ ನಂ.11/1 ರ ಸ್ವತ್ತನ್ನುಅನುಭವಿಸುತ್ತಿದ್ದಳು ಎಂದರೆ ಸರಿಯಲ್ಲ.

ಕೊರಮಪ್ಪನ ಹೆಂಡತಿ ಕರಿಯಮ್ಮ 1993 ರಲ್ಲಿ ಮೃತಪಟ್ಟಿದ್ದಾಳೆ. ಕರಿಯಮ್ಮ ಆಕೆಯ ಜೀವಿತಕಾಲದಲ್ಲಿ ಸರ್ವೆ ನಂ.11/1 ರ ಸ್ವತ್ತನ್ನು 23.11.1982 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಳು ಎಂದರೆ ಸರಿಯಲ್ಲ ಅದೇ ದಿನ ಸರ್ವೆ ನಂ.3 ರಲ್ಲಿನ 6 ಎಕರೆ 1 ಗುಂಟೆ ಜಮೀನನ್ನು ಕರಿಯಮ್ಮ 1 ನೇ ಪ್ರತಿವಾದಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಾಳೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

1 ನೇ ಪ್ರತಿವಾದಿ ಆತನ ಜೀವಿತಾವಧಿಯಲ್ಲಿ ದಾವಾಸ್ತಿಗಳನ್ನು ದಿಃ28.08.1995 ರಂದು ಹೊನ್ನಪ್ಪ, ಕುಮಾರಸ್ವಾಮಿ, ವಿಶ್ವೇಶ್ವರಯ್ಯ, ಲೋಕೇಶರವರಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯ 13 ನೇ ಪ್ರತಿವಾದಿ ತಿಪ್ಪೀರಮ್ಮ ಕೋಂ ಕದುರಪ್ಪ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿಗಳು ನನ್ನ ಅಣ್ಣ ತಮ್ಮಂದಿರ ವಿರುದ್ಧ ಹೂಡಿದ್ದಾರೆ. 1 ನೇ ಪ್ರತಿವಾದಿ ಆತನ ಜೀವಿತಕಾಲದಲ್ಲಿ ಸರ್ವೆ ನಂ.11/1 ರ ಸ್ವತ್ತನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸರ್ವೆ ನಂ.11/1 ರಲ್ಲಿನ 10 ಗುಂಟೆ ಜಮೀನನ್ನು ರಾ.ಹೆದ್ದಾರಿ ಪ್ರಾಧಿಕಾರದವರು ಭೂಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು 1 ನೇ ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಪಲ್ಲಕಪ್ಪ ಆ ಹಣ ಪಡೆಯಲು ಓಡಾಡುತ್ತಿದ್ದ ಎಂದು ಉತ್ತರಿಸುತ್ತಾರೆ. ಈ

ದಾವೆಯ 14 ನೇ ಪ್ರತಿವಾದಿ ದೊಡ್ಡತಿಮ್ಮಪ್ಪನ ಮಗ ರಾಮಚಂದ್ರಪ್ಪ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸರ್ವೆ ನಂ.11/1 ರಲ್ಲಿನ 4 ಎಕರೆ ಜಮೀನನ್ನು 14 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಕೊರಮಪ್ಪನ ಹೆಂಡತಿ ಕರಿಯಮ್ಮನ ಮರಣಾನಂತರ ದಾವಾಸ್ತಿಗಳನ್ನು 1 ನೇ ಪ್ರತಿವಾದಿ ಅನುಭವಿಸುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನೇ ಅನುಭವಿಸುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ 18 ನೇ ವರ್ಷದಿಂದ ನಾನು ದಾವಾಸ್ತಿಗಳನ್ನು ಅನುಭವಿಸುತ್ತಿದ್ದೇನೆ. ನಾನು ದಾವಾಸ್ತಿಗಳನ್ನು ಅನುಭವಿಸುತ್ತಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಪಲ್ಲಕಪ್ಪ ಯಾವತ್ತೂ ದಾವಾಸ್ತಿಯ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸಾಕ್ಷಿ 2006 ರಲ್ಲಿ ಆತ ಮೃತ ಪಟ್ಟಿದ್ದಾನೆ ಎಂದು ಉತ್ತರಿಸುತ್ತಾರೆ. ಆತ ಮೃತಪಡುವವರೆಗೂ ದಾವಾಸ್ತಿಯನ್ನು ಅನುಭವಿಸುತ್ತಿದ್ದ.

ದಾವಾಸ್ತಿಯ ಖಾತೆ ಈಗ ಯಾರ ಹೆಸರಿನಲ್ಲಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರಬಹುದು ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕೊರಮಪ್ಪನವರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ಮೃತ್ಯುಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ಪಲ್ಲಕಪ್ಪನ ಹೆಂಡತಿ ಮಕ್ಕಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.